ಕಥೆ

# ಎಂಟ್ರೋಪಿ



ಗೌತಮ ಜ್ಯೋತ್ಸ್ನಾ

ಕಲೆ: ವಿಶ್ವನಾಥ್ ಎ.ಎಸ್.

**Every dog has its day,**
**And a good dog**
**Just might have two days.**

-Anonymous

'ಆಚೆ ಸಿಟ್-ಔಟ್ ಅಲ್ಲಿ ಕೂರೋಣ್ವಾ ವಿಕಾಸ, ಗಾಳಿ ಇನ್ನೂ ಚೆನ್ನಾಗಿ ಬೀಸುತ್ತೆ...' ಎಂದ ಮ್ಯಾಕ್ಸ್, ತುಂಬಾ ಚಿಲ್ಡ್ ಆಗಿದ್ದ ಬಡ್ಸ್ ಬಿಯರ್ ಕ್ಯಾನಿನ ಸೀಲು ಬಿಚ್ಚಿದ. ಆತ ಕಿತ್ತ ರಭಸದಿಂದ ಸ್ವಯಂ ಪೂರ್ಣವಲಯದಲ್ಲೇ ಅಡಕವಾಗಿದ್ದ ಅಸ್ತಿತ್ವವು ಅನಾಮತ್ತಾಗಿ ಸ್ವತಂತ್ರ ವ್ಯವಸ್ಥೆಗೆ ತೆರೆದುಕೊಂಡ ಪರಿಣಾಮವಾಗಿ ಆ ಕ್ಯಾನು ದಿಢೀರನೆ ಆತನ ಕೈಯಿಂದ ಚಂಗನೆ ನೆಗೆದು, ಒಳಗಿದ್ದ ದ್ರವವನ್ನೆಲ್ಲಾ ಗಾಳಿಯಲ್ಲಿ ನೊರೆನೊರೆಯಾಗಿ ಉಕ್ಕಿಸಿ, ಹರಿಸಿ, ಸುತ್ತೆಲ್ಲ ಚಿಮ್ಮಿಸುತ್ತಾ, ಒಂದೆರೆಡು ಬಾರಿ ಗಿರಕಿ ಹೊಡೆದು ಮತ್ತೆ ಮೊಗಚಿ ನೆಲದ ಮೇಲೆ ಬಿದ್ದು, ಸುಯ್ಯನೆ ಗ್ರಾನೈಟ್ ಫ್ಲೋರಿನ ಮೇಲೆ ಸ್ಕೇಟಿಂಗ್ ಆಡಿ, ಆ ಬಾರ್ ಕೌಂಟರಿಗೆ ಡಿಕ್ಕಿ ಹೊಡೆದು ತುಸು ಚೆಟ್ಟೆಯಾಗಿ, ಹೇಗೆ ಈ ಸರ್ಜಿಕಲ್ ಅಟ್ಯಾಕಿಗೆ ಸ್ಪಂದಿಸಬೇಕೆಂದು ಲೆಕ್ಕ ಹಾಕುತ್ತಾ ಕಣ್ಣು ಬಾಯಿ ಬಿಟ್ಟುಕೊಂಡು ಗಕ್ಕನೆ ನಿಂತಿದ್ದ ವಿಕಾಸನ ದಿಕ್ಕಿನಲ್ಲಿ ಕೆರಳಿ ಬೆಂಕಿ ಭುಸುಗುಡುತ್ತಾ ಶರವೇಗದಲ್ಲಿ ಹಾರಿಬರುವ ಕರಿಕಾಳ ಕೋಣನಂತೆ ಹಾರಿ ಬಂದು ಜೀವಧಾತುಗಳನ್ನು ಉತ್ಪಾದಿಸುವ ಆತನ ಬೀಜಕೋಶಕ್ಕೆ ಡಿಕ್ಕಿ ಹೊಡೆದು, ಈ ಘರ್ಷಣೆಯಿಂದ ತನ್ನ ವೇಗವನ್ನು ಕಳೆದುಕೊಂಡು ಹಿಮ್ಮುಖವಾಗಿ ರಿಬೌಂಡ್ ಹೊಡೆದು ನಿಧಾನಕ್ಕೆ ನೆಲದ ಮೇಲೆ ಮತ್ತೆ ಬಿದ್ದು ಅಲ್ಲೇ ತುಳುಕಾಡಿ ಸ್ಥಿರವಾಯಿತು. ಕೆಳಗೆಲ್ಲಾ ಆಚೆ ಕಂಪಿಸುತ್ತಿದ್ದ ಸಮುದ್ರದ ಅಲೆಗಳೇ ಬಂದು ಅಪ್ಪಳಿಸಿದಂತೆ ಚೆಲ್ಲಿದ ಬಿಯರ್ರು.... 'ಅಯ್ಯೋ! ಅಪ್ಪಾ.... ಹೋಯ್ತು... ಕಣೋ.... ಅಪ್ಪಾ...' ತನ್ನ ತೊಡೆಗಳ ಮಧ್ಯೆ ಕೈಯನ್ನು ಅವುಚಿ ಹಿಡಿದು ನರಳಾಡುತ್ತಿದ್ದ ವಿಕಾಸ. ಮ್ಯಾಕ್ಸ್ ಬಿದ್ದು-ಬಿದ್ದು ನಗುತ್ತಿದ್ದ.

'ಏನ್ ಲಕ್ಕ್ ಗುರು ನಿಂದು... ತರಡು ಜೋಪಾನ!'

'ಹಾಳಾದವ್ನೇ... ಥೂ... ಡಾಕ್ಟರ್ ಹತ್ರ ಹೋಗ್ಬೇಕು ಕಣೋ... ನನ್ನ ಕಥೆ ಮುಗೀತು'

ಈ ಮಾತು ಮ್ಯಾಕ್ಸ್‌ನನ್ನು ಇನ್ನೂ ಬಿದ್ದು-ಬಿದ್ದು ನಗಲು ಪ್ರೇರೇಪಿಸಿತು.

'ಹ್ಹಾ....ಹ್ಹಾ.... ನಗ್ತೀಯಲ್ಲ ಮಾರಾಯ...'

'ಸತ್ತ್ ಹೋಗಲ್ಲ ಕಣೋ ಹೆದ್ರಕೋಬೇಡ... ಬರೀ ಮೂವತ್ತೈದು ನಿಂಗೆ... ಐಸ್ ತರ್ತೀನ್ ತಾಳು... ಈ ಹಾಳಾದ್ ನಾರಾಯಣ ಐಸ್ ಎಲ್ಲಿಡ್ತಾನೋ...' ಗೊಣಗುತ್ತಾ ಫ್ರೀಜರಿಂದ ಹೊಗೆಯಾಡುತ್ತಿದ್ದ ಐಸ್ ಪ್ಯಾಕ್ ತೆಗೆದು ವಿಕಾಸನ ಕಡೆ ರೊಯ್ಯನೆ ಬೀಸಿದ. ಹೀಗೆ ಇನ್ನೊಮ್ಮೆ ಒಮ್ಮುಖವಾಗಿ ತನ್ನತ್ತ ಸಾಗಿಬರುತ್ತಿದ್ದ ವಸ್ತುವನ್ನು ಹಿಡಿಯಲು ಧೈರ್ಯ ಮಾಡದೆ ವಿಕಾಸ ತನ್ನ